# ಮಾಹಿತಿ ಮತ್ತು ಅರಿವು

**ಈ** ಕಾಲಘಟ್ಟವನ್ನು 'ಮಾಹಿತಿ ಯುಗ'ವೆಂದು ಗುರುತಿಸುತ್ತಾರೆ. ವರ್ತಮಾನ ಕಾಲದಲ್ಲಿ ವಿದ್ಯುನ್ಮಾನ ಕ್ಷೇತ್ರದಲ್ಲಿ ಆದ ಕ್ರಾಂತಿಯ ಪರಿಣಾಮವಾಗಿ ಜಗತ್ತಿನ ಜ್ಞಾನವೆಲ್ಲವೂ ಮಾಹಿತಿ ರೂಪದಲ್ಲಿ ನಮಗೆ ದೊರಕುತ್ತಿದೆ. ನಮ್ಮ ಪೂರ್ವಿಕರ ಕಲಿಕೆಯ ಶ್ರಮವನ್ನು, ಮಿತಿಯನ್ನು ಗಮನಿಸಿದರೆ ಇಂದು ನಮಗೆ ಮಾಹಿತಿ ಅತ್ಯಂತ ಸುಲಭವಾಗಿರುವುದು ಸತ್ಯ. ನಮ್ಮ ಓದು ಕೊಠಡಿಯ ಕಂಪ್ಯೂಟರ್ ಮುಂದೆ ಕುಳಿತು ಬೆರಳ ತುದಿಯನ್ನು ಕೀಲಿಮಣೆಯ ಮೇಲೆ ಆಡಿಸತೊಡಗಿದರೆ ಜಗತ್ತು ಭೂತ- ವರ್ತಮಾನ- ಭವಿಷ್ಯಗಳ ವ್ಯಾಪ್ತಿ ಮತ್ತು ಸ್ವರೂಪಗಳ ರೂಪದಲ್ಲಿ ಬಿಚ್ಚಿಕೊಳ್ಳತೊಡಗುತ್ತದೆ. ವಿಪುಲವಾದ ಮಾಹಿತಿ ನಿಮ್ಮ ಕಣ್ಮುಂದೆ ಅಕ್ಷರ ರೂಪದಲ್ಲಿ, ದೃಶ್ಯಾವಳಿಗಳ ರೂಪದಲ್ಲಿ ಅನಾವರಣಗೊಳ್ಳುತ್ತದೆ. ಅನೇಕ ಬಾರಿ ನಿಮ್ಮ ಕಣ್ಮುಂದೆ ಮೂಡುವ ವಿಪುಲ ಮಾಹಿತಿ ನಿಮಗೆ ದಿಗ್ಭ್ರಮೆಯನ್ನೂ ಭಯವನ್ನೂ ಮೂಡಿಸುತ್ತದೆ; ಗೊಂದಲಗಳನ್ನು ಸೃಷ್ಟಿಸುತ್ತದೆ.

ಆದರೆ ಹಿಂದೆ ಜ್ಞಾನ ಸಂಪಾದನೆಯ ಮಾರ್ಗ ಸುಲಭವಾಗಿರಲಿಲ್ಲ. ಅದೊಂದು ಸಾಧನೆ; 'ಶಿಕ್ಷಣ' ದೇಹ ಮನಸ್ಸುಗಳನ್ನು ಸಮಚಿತ್ತ ಸ್ಥಿತಿಯಲ್ಲಿ ಕೂಡಿಸಿ ಕಲಿಯುವಿಕೆಯಲ್ಲಿ ತೊಡಗಿಸಬೇಕಾಗಿತ್ತು. ಅದು ಮುಖ್ಯವಾಗಿ ಗುರುವಿನ ಮೂಲಕ ಹರಿದು ಬರುತ್ತಿತ್ತು. ಈ ಜ್ಞಾನ ಪ್ರವಾಹದಲ್ಲಿ ಶಿಷ್ಯನ ಶಕ್ತಿಗನುಗುಣವಾಗಿ ದಕ್ಕಿಸಿಕೊಳ್ಳುವಷ್ಟು ದೊರೆಯುತ್ತಿತ್ತು. ಅಂಥ ಪರೀಕ್ಷೆಗಳಲ್ಲಿ ಗೆದ್ದು ಬಂದವನು ನಿಜಕ್ಕೂ ಅರಿವಿನಿಂದ ಕೂಡಿರುತ್ತಿದ್ದ. ಏಕೆಂದರೆ ಅಂದಿನ ಪರೀಕ್ಷೆಗಳು ತರತಮಭಾವವನ್ನು ತೋರುತ್ತಿರಲಿಲ್ಲ; ಒಳದಾರಿಗಳನ್ನು ಬಿಟ್ಟುಕೊಳ್ಳುತ್ತಿರಲಿಲ್ಲ.

ಅಂದಿನ ಕಲಿಕೆಯು ವಿಸ್ತಾರದ ವ್ಯಾಪ್ತಿಯನ್ನು ಹೊಂದಿರಲಿಲ್ಲವೆಂಬ ಮಾತಿನಲ್ಲಿ ಸತ್ಯವಿದೆ. ಅದು ಜಾಗತಿಕ ವಿದ್ಯಮಾನಗಳ ವ್ಯಾಪ್ತಿಯನ್ನು ಪಡೆದಿರಲಿಲ್ಲ. ಅದಕ್ಕೆ ಭೌಗೋಳಿಕ ಕಾರಣಗಳಿದ್ದವು. ಒಂದು ಕಡೆಯಿಂದ ಮತ್ತೊಂದೆಡೆಗೆ ಜ್ಞಾನಭಿಕ್ಷುವಾಗಿ ಹೋಗಿ ಬರುವುದು ಕಷ್ಟಸಾಧ್ಯವಾಗಿತ್ತು. ಪ್ರಾಚೀನ ಭಾರತದಲ್ಲಿ ಪ್ರಸಿದ್ಧ ಜ್ಞಾನ ಕೇಂದ್ರಗಳಾಗಿದ್ದ ತಕ್ಷಶಿಲಾ, ನಳಂದ, ಕಾಶಿ, ಕಂಚಿ ಮೊದಲಾದವು ದೇಶದ ಬೇರೆ ಬೇರೆ ಮೂಲೆಗಳಿದ್ದವು, ಎಲ್ಲರೂ ಅವನ್ನು ಹುಡುಕಿ ಹೋಗಿ ಬರುವಂಥ, ಕಲಿತು ಬರುವಂಥ ಅನುಕೂಲಗಳಿರಲಿಲ್ಲ. ಹೀಗಾಗಿ ಸ್ಥಳೀಯವಾಗಿ ದೊರಕುವ ಗುರುಕುಲದ ಜ್ಞಾನಮಿತಿಯ ಪರಿಧಿಯೊಳಗೇ ಕಲಿಕೆ ಸಾಗುತ್ತಿತ್ತು. ಹೀಗಾಗಿ ಈ ಕಲಿಕೆಗೆ ಈಗಿರುವಂತೆ ವಿಶ್ವವ್ಯಾಪಕತೆ ಪ್ರಾಪ್ತವಾಗುತ್ತಿರಲಿಲ್ಲ. ಗುರು ತನಗೆ ತಿಳಿದ ಜ್ಞಾನವನ್ನು ಶಿಷ್ಯರಿಗೆ ಧಾರೆಯೆರೆಯುತ್ತಿದ್ದ, ಆದರೆ ಅದರ ಮಿತಿ ಗುರು-ಶಿಷ್ಯರಿಬ್ಬರಿಗೂ ತಿಳಿದಿತ್ತು. ಮಿತಿಯನ್ನು ಒಪ್ಪಿಕೊಳ್ಳುವ ವಿನಯವಿತ್ತು. ಆದ್ದರಿಂದಲೇ ಕಲಿಕೆಯನ್ನು ಅವರು ಅನಂತವೆಂದು ಕರೆದರು. ಅದು ವಿಸ್ತಾರವಾಗಿ ಹರಡಿಕೊಳ್ಳುವುದರ ಬದಲು ವ್ಯಕ್ತಿತ್ವದ ಆಳಕ್ಕೆ ಇಳಿಯತೊಡಗಿತು. ಹೀಗಾಗಿ ಕಲಿಕಾರ್ಥಿ ವಿದ್ಯೆಯೆಂದರೆ ಅಂತಃಸಾಕ್ಷಿಯನ್ನು ಜಾಗೃತಗೊಳಿಸಿಕೊಳ್ಳುವುದು; ಬದುಕಿನ ಮತ್ತು ಬದುಕಿನಾಚೆಯ ಬದುಕಿನ ಬಗ್ಗೆ ತಿಳಿಯುವುದು; ಸಮುದಾಯ ಜೀವಿಯಾಗಿ ಅರಳುವುದು; ನೈತಿಕ ಪಥದಲ್ಲಿ ಸಾಗುವುದು ಎಂದು ತಿಳಿದು ಗುರುಕುಲದಿಂದ ಹೊರ ಬರುತ್ತಿದ್ದ. ಆ ತಿಳಿವನ್ನು ಬದುಕಲು ಪ್ರಯತ್ನಿಸುತ್ತಿದ್ದ.

ವರ್ತಮಾನದ ಕಾಲ ಹಿಂದಿನಂತಿಲ್ಲ. ಜಗತ್ತು ವಿಜ್ಞಾನ-ತಂತ್ರಜ್ಞಾನದ ಕಾರಣದಿಂದಾಗಿ ಕಿರಿದಾಗಿದೆ. ಭೂಮಿಯಾಚೆಗಿನ ನಕ್ಷತ್ರ ತಾರೆ ಗ್ರಹಗಳ ಅರಿವು ವಿಸ್ತಾರಗೊಂಡಿದೆ. ಆ ಜ್ಞಾನ ಮಾಹಿತಿಗಳೆಲ್ಲವೂ ನಮ್ಮ ಬೆರಳ ತುದಿಯಲ್ಲೇ ಕುಣಿಯುತ್ತಿರುವಂತೆ ಸತ್ಯರೂಪ ತಾಳಿದೆ. ಆಧುನಿಕ ಶಿಕ್ಷಿತ ವಿಪುಲವಾದ ಮಾಹಿತಿ ಜ್ಞಾನದಿಂದ ತುಂಬಿ ತುಳುಕಿದವನಂತೆ ಕಾಣುತ್ತಾರೆ. ಆದರೆ ಅವನು ತಿಳಿದ ವಿಪುಲ ಮಾಹಿತಿಗಳೆಲ್ಲವೂ ಅವನನ್ನು ಜ್ಞಾನಿಯನ್ನಾಗಿ ಮಾಡಲು ವಿಫಲವಾಗಿವೆಯೆಂಬುದು ನಮ್ಮ ಅನುಭವಕ್ಕೆ ಈಗ ಗೋಚರವಾಗುತ್ತಿದೆ. ಈ ವಿಪುಲ ಮಾಹಿತಿಗಳು ಅವನನ್ನು ಭೋಗಶೀಲನನ್ನಾಗಿ ರೂಪಿಸುತ್ತಿವೆ; ಅದನ್ನು ಅವನು 'ಅಭಿವೃದ್ಧಿ' ಎಂಬ ಹೆಸರಲ್ಲಿ ಗುರುತಿಸುತ್ತಾನೆ. ಆ 'ಅಭಿವೃದ್ಧಿ'ಗಾಗಿ ತಾನು ಕಲಿತ ಮಾಹಿತಿಯನ್ನು ಬಳಸುತ್ತಾನೆ. ಅದರಿಂದ ಅನೇಕ ಲೌಕಿಕ ಸೌಲಭ್ಯ ಸುಖಗಳನ್ನು ಪಡೆಯುತ್ತಾನೆ. ಆ ಸೌಲಭ್ಯ ಸುಖ ಪ್ರಾಪ್ತಿಯೇ ಬದುಕಿನ ಪರಮ ಗುರಿಯೆಂದು ತಿಳಿಯುತ್ತಾನೆ. ಅವನು ಎಚ್ಚೆಚ್ಚು ವ್ಯಕ್ತಿ ಕೇಂದ್ರಿತನಾಗುತ್ತಾನೆ. ತನಗೂ ತನ್ನ ಕುಟುಂಬಕ್ಕೂ, ತನಗೂ ತನ್ನ ಸಮಾಜಕ್ಕೂ ಇರುವ ಸಂಬಂಧ ಅರ್ಥವಂತಿಕೆಯನ್ನು ಅರಿಯಲು ವಿಫಲನಾಗುತ್ತಾನೆ.

ಇದಕ್ಕೆ ಬಹುಪಾಲು ಕಾರಣ ಆಧುನಿಕ ವಿದ್ಯೆಯಲ್ಲಿ ದೊರಕುತ್ತಿರುವ ವಿಪುಲ ಮಾಹಿತಿ ಅವನಲ್ಲಿ ಜೀರ್ಣವಾಗಿ ರಕ್ತಮಾಂಸವಾಗಿ, ಜ್ಞಾನವಾಗಿ ಅರಳದೆ ಇರುವುದು. ಅದು ಜ್ಞಾನ ಮೂಲವಾಗಿ ಅರಿವಾಗಿ ವ್ಯಕ್ತಿಯಲ್ಲಿ ಅರಳಿದಾಗ ಮಾತ್ರ ಅದು ನಿಜವಾದ ವಿದ್ಯೆ ಎನ್ನಿಸಿಕೊಳ್ಳುತ್ತದೆ. ಆಗ ನಮಗೆ ಸಮಾಜ ಜೀವಿಯೂ, ಜನಪರ ಜೀವಿಯೂ ಆದ ಮಾನವೀಯ ಸೆಲೆಯ ವ್ಯಕ್ತಿ ಸಿಗುತ್ತಾನೆ. ವಿದ್ಯೆ ಕೇವಲ ಮಾಹಿತಿ ಸಂಗ್ರಹಣೆಯಲ್ಲ; ಭೌತಿಕ ಸುಖದ ಪೂರೈಕೆ ಅದರ ಗುರಿಯಲ್ಲ. ಅದಕ್ಕೆ ಸಾಮಾಜಿಕ ಸುಖದ ಗುರಿ ಇರುತ್ತದೆ. ವಿದ್ಯೆಯೆಂದರೆ ಸಾಮಾಜಿಕ ಸುಖದಲ್ಲಿ ತನ್ನ ಸುಖವನ್ನು ಕಾಣುವ ಸ್ಥಿತಿ. ಆ ಸ್ಥಿತಿಗೆ ವ್ಯಕ್ತಿ ತಲುಪಬೇಕಾದರೆ ಅವನು ಕಲಿತ ಕಲಿಕೆಯೆಲ್ಲವೂ ಅವನಲ್ಲಿ ಅರಿವಾಗಿ ಅರಳಿ ಜೀವನ ಮಾರ್ಗದರ್ಶಿಯಾಗಬೇಕು. ಆಗ ಮಾತ್ರ ಅದಕ್ಕೊಂದು ಅರ್ಥ, ಸಾರ್ಥಕ್ಯ ಪ್ರಾಪ್ತಿ.

■ ಶಿಕಾಕು

# ಮಾತೇ ಮುತ್ತು

★ ತತ್ವದ ಅಂಶಗಳನ್ನು ಅಳವಡಿಸಿಕೊಂಡು ಅದರಂತೆ ಜೀವನ ನಡೆಸಲು ಮನಸ್ಸು ಮಾಡಿದರಷ್ಟೇ ತತ್ವಪದಗಳನ್ನು ಮನಃಪೂರ್ವಕವಾಗಿ ಹಾಡಲು ಸಾಧ್ಯ.

-ತಂಬೂರಿ ಜವರಯ್ಯ

★ ಧಾರಾಳವಾಗಿ ಕೊಟ್ಟುಬಿಡುವ ಪ್ರೇಮವೇ ನಾವು ಇಟ್ಟುಕೊಳ್ಳಬಹುದಾದ ಪ್ರೇಮ.

-ಎಲ್ಬರ್ಟ್ ಹಬ್ಬರ್ಡ್

★ ಇನ್ನೊಬ್ಬರ ಸರಿ ತಪ್ಪುಗಳನ್ನು ಎಣಿಸುವ ನ್ಯಾಯಾಧೀಶನಾಗುವುದಾದರೆ ಅವರನ್ನು ಪ್ರೇಮಿಸುವುದು ಅಸಾಧ್ಯ.

-ವಾಲಿಫೇಮಸ್ ಅಮೋಸ್

★ ಪ್ರೇಮಿಸಿ ವಿಫಲನಾಗುವುದು ಎಂದೇ ಪ್ರೇಮಿಸದೆ ಇರುವುದಕ್ಕಿಂತ ಲೇಸು.

-ಲಾರ್ಡ್ ಟೆನಿಸನ್

★ ಪ್ರೇಮ ಕಾವ್ಯದಂತೆ- ಸಂತೋಷ, ತೃಪ್ತಿಯಲ್ಲಿ ಹುಟ್ಟುತ್ತದೆ; ವಿವೇಕದಲ್ಲಿ ಮುಕ್ತಾಯವಾಗುತ್ತದೆ.

-ರಾಬರ್ಟ್ ಫ್ರಾಸ್ಟ್

★ ಪ್ರೇಮವು ನಿಮ್ಮನ್ನು ಪಟ್ಟಕ್ಕೇರಿಸುವಂತೆ ಶೂಲಕ್ಕೇರಿಸಲೂ ಬಹುದು; ಅದು ನಿಮ್ಮನ್ನು ಎತ್ತರಿಸಿದಂತೆ ಕತ್ತರಿಸಲೂಬಲ್ಲದು.

-ಖಲೀಲ್ ಗಿಬ್ರಾನ್

★ ಪ್ರೇಮ, ಸಾವು-ಎರಡನ್ನೂ ಸ್ವಾಗತಿಸಬೇಕು. ಪ್ರೇಮ ಸುಖದ ಭರವಸೆಯನ್ನು ಕೊಟ್ಟರೆ, 'ಸಾವು' ಸುಖವನ್ನೇ ಕೊಡುತ್ತದೆ.

-ಮಾರ್ಕ್ ಟ್ವೇನ್

★ ಪ್ರೇಮ ಬಹಳಷ್ಟನ್ನು ಮಾಡಬಲ್ಲದು; ಹಣ ಎಲ್ಲವನ್ನೂ ಮಾಡಬಲ್ಲದು.

-ಬ್ರಿಟನ್ ಗಾದೆ

★ ಪ್ರೇಮ ಸ್ವಲ್ಪ ಕಾಲ ಇದ್ದರೆ, ದ್ವೇಷ ಬಹುಕಾಲ ಇರುತ್ತದೆ.

-ಐರಿಷ್ ಗಾದೆ

★ ಪ್ರೇಮದ ಕೊನೆಯ ದಿನ, ಮದುವೆಯ ಮೊದಲ ದಿನ ತಪ್ಪು ಮಾಡುವುದು ಕೈ ಅಲ್ಲ- ಬಾಯಿ.

-ಸ್ವಿಸ್ ಗಾದೆ

★ ಬಿತ್ತಿದಂತೆಯೆ ಹೊರತು, ಬಯಸಿದಂತಲ್ಲ ಬೆಳೆ.

-ಕೆ.ಎಸ್.ನಿಸಾರ್ ಅಹಮದ್

★ ನಾನು ಬುದ್ಧಿವಂತನಲ್ಲ, ಶ್ರದ್ಧಾವಂತ.

-ಎಂ.ಎಂ.ಕಲಬುರ್ಗಿ

★ ಬಡತನಕ್ಕಿರುವಷ್ಟು ಧನಲೋಭ ಸಿರಿತನಕ್ಕೆಂದಿಗು ಇಲ್ಲಯ್ಯ.

-ಎಸ್.ವಿ.ರಂಗಣ್ಣ